ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002

ಸಂಖ್ಯೆ: BBMP/Addl.Dir/JD NORTH/LP/0280/2017-18 ದಿನಾಂಕ: 07/04/2022

# ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಖಾತಾ ಸಂಖ್ಯೆ: 1066, ವರ್ತೂರು ಗ್ರಾಮದ ಸರ್ವೆ ನಂ. 171/1, 171/2, 171/3, 171/4, 172, 173/2, 173/3, 183/2(ಪಿ), 183/3, 183/6ಎ, 183/6ಬಿ, 183/7, 183/8, 183/9, 183/11, 184/1(ಪಿ) ಮತ್ತು ಗುಂಜೂರು ಗ್ರಾಮದ ಸರ್ವೆ ನಂ. 217/3, 227/1(ಪಿ), 227/2, 227/3 ಮತ್ತು 227/4, 228/1, 228/2, 229/1, 229/2, 229/3, 229/4, 229/5, 229/12, 230/4(ಪಿ), ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 149, ಮಹದೇವಪುರ ವಲಯ, ಬೆಂಗಳೂರು ರ ಸ್ವತ್ತಿನಲ್ಲಿ ನಿರ್ಮಿಸುತ್ತಿರುವ ಬಿಲ್ಡಿಂಗ್ – 1 ರ ವಾಣಿಜ್ಯ ಮತ್ತು ಬಿಲ್ಡಿಂಗ್ – 4 ರ ವಸತಿ ಸಮುಚ್ಚಯ ಕಟ್ಟಡ ಹಾಗೂ ವಾಣಿಜ್ಯ (ರೀಟೇಲ್ / ಕಛೇರಿ ಮತ್ತು ಹಾಸ್ಟೆಲ್) ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: BBMP/Addl.Dir/JDNORTH/LP/ 280/2017-18 ರಂತೆ ದಿನಾಂಕ: 05-09-2018
2) ತಮ್ಮ ಮನವಿ ಪತ್ರ ದಿನಾಂಕ: 27-01-2022

* * * * * * *

ಆಸ್ತಿ ಖಾತಾ ಸಂಖ್ಯೆ: 171/1, 171/2, 171/3, 171/4, 172, 173/2, 173/3, 183/2(ಪಿ), 183/3, 183/6ಎ, 183/6ಬಿ, 183/7, 183/8, 183/9, 183/11, 184/1(ಪಿ) ಮತ್ತು ಗುಂಜೂರು ಗ್ರಾಮದ ಸರ್ವೆ ನಂ. 217/3, 227/1(ಪಿ), 227/2, 227/3 ಮತ್ತು 227/4, 228/1, 228/2, 229/1, 229/2, 229/3, 229/4, 229/5, 229/12, 230/4(ಪಿ),ವರ್ತೂರು ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ವಾರ್ಡ್ ನಂ. 149, ಮಹದೇವಪುರ ವಲಯ, ಬೆಂಗಳೂರು ರ ಸದರಿ ಸ್ವತ್ತಿನಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 10–04–2018 ರಂದು ವಸತಿ ಮತ್ತು ವಸತಿಯೇತರ ಅಭಿವೃದ್ಧಿ ಯೋಜನಾ ನಕ್ಷೆಗೆ ಅನುಮೋದನೆಯನ್ನು ಪಡೆದುಕೊಂಡಿರುತ್ತಾರೆ. ತದನಂತರ ಸದರಿ ಸ್ವತ್ತಿನಲ್ಲಿ ಬಿಲ್ಡಿಂಗ್ – 1 ರಿಂದ 4 ರವರೆಗೆ ಸಾಮಾನ್ಯ 3 ತಳ ಮಹಡಿಗಳನ್ನೊಳಗೊಂಡಂತೆ ಬಿಲ್ಡಿಂಗ್ – 1 ರಲ್ಲಿ ನೆಲ + ಮೇಲಿನ 18 ಅಂತಸ್ತುಗಳ ವಾಣಿಜ್ಯ ಕಟ್ಟಡ, ಬಿಲ್ಡಿಂಗ್ – 2 ರಲ್ಲಿ ನೆಲ + ಮೇಲಿನ 4 ಅಂತಸ್ತುಗಳ ವಾಣಿಜ್ಯ (ಆಡಿಟೋರಿಯಂ) ಕಟ್ಟಡ, ಬಿಲ್ಡಿಂಗ್ – 3 ರ ಟವರ್ – ಎ, ಸಿ ಮತ್ತು ಇ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡ, ಟವರ್ – ಬಿ ಮತ್ತು ಡಿ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳ ವಾಣಿಜ್ಯ (ರೀಟೇಲ್ / ಕಛೇರಿ ಮತ್ತು ಹಾಸ್ಟೆಲ್) ಕಟ್ಟಡ, ಬಿಲ್ಡಿಂಗ್ – 4 ರ ಟವರ್ – ಎಫ್, ಹೆಚ್, ಜೆ ಮತ್ತು ಎಲ್‌ರಲ್ಲಿ ನೆಲ + ಮೇಲಿನ 26 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡ, ಟವರ್ – ಜಿ, ಐ, ಕೆ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳ ವಾಣಿಜ್ಯ (ರೀಟೇಲ್ / ಕಛೇರಿ ಮತ್ತು ಹಾಸ್ಟೆಲ್) ಕಟ್ಟಡ, ಮತ್ತು ಬಿಲ್ಡಿಂಗ್ – 5, 6 ಮತ್ತು 7 ರಲ್ಲಿ ಸಾಮಾನ್ಯ 2 ತಳ ಮಹಡಿಗಳನ್ನೊಳಗೊಂಡಂತೆ (ವಸತಿ ಸಮುಚ್ಚಯ ಕಟ್ಟಡಗಳು) ಬಿಲ್ಡಿಂಗ್ – 5 ರಲ್ಲಿನ ಟವರ್ – ಎ, ಡಿ, ಎಫ್ ಮತ್ತು ಹೆಚ್ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳು, ಟವರ್ – ಬಿ, ಸಿ, ಇ ಮತ್ತು ಜಿ ರಲ್ಲಿ ಭಾಗಶಃ ಭಾಗದಲ್ಲಿ ನೆಲ + ಮೇಲಿನ 26 ಅಂತಸ್ತುಗಳು ಮತ್ತು ಭಾಗಶಃ ಭಾಗದಲ್ಲಿ ನೆಲ + ಮೇಲಿನ 9 ಅಂತಸ್ತುಗಳು, ಬಿಲ್ಡಿಂಗ್ – 6 ರಲ್ಲಿನ ಟವರ್ – ಜೆ ಮತ್ತು ಐ ರಲ್ಲಿ ಭಾಗಶಃ ಭಾಗದಲ್ಲಿ ನೆಲ + ಮೇಲಿನ 26 ಅಂತಸ್ತುಗಳು ಮತ್ತು ಭಾಗಶಃ ಭಾಗದಲ್ಲಿ ನೆಲ + ಮೇಲಿನ 9 ಅಂತಸ್ತುಗಳು, ಬಿಲ್ಡಿಂಗ್ – 07 ಟವರ್ – ಕೆ, ಪಿ, ಕ್ಯೂ ಮತ್ತು ಎನ್ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳು, ಟವರ್ – ಎಲ್ ರಲ್ಲಿ ನೆಲ + 23 ಅಂತಸ್ತುಗಳು, ಟವರ್ – ಎಂ ಮತ್ತು ಓ ರಲ್ಲಿ ಭಾಗಶಃ ಭಾಗದಲ್ಲಿ ನೆಲ + ಮೇಲಿನ 26 ಅಂತಸ್ತುಗಳು ಮತ್ತು ಭಾಗಶಃ ಭಾಗದಲ್ಲಿ ನೆಲ + ಮೇಲಿನ 9 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡಗಳು ಹಾಗೂ ಬಿಲ್ಡಿಂಗ್ – 8 ರಲ್ಲಿ ತಳ + ನೆಲ + ಮೇಲಿನ 3 ಅಂತಸ್ತುಗಳ ಕ್ಲಬ್‌ಹೌಸ್ ಕಟ್ಟಡ ನಿರ್ಮಿಸಲು ಈ ಕಛೇರಿಯಿಂದ ಎಲ್‌ಪಿ ಸಂಖ್ಯೆ: BBMP/Addl.Dir/ JDNORTH/LP/0280/2017-18 ರಂತೆ ದಿನಾಂಕ: 05–09–2018 ರಂದು ನಕ್ಷೆ ಮಂಜೂರಾತಿಯನ್ನು ಪಡೆದುಕೊಂಡಿರುತ್ತಾರೆ. ತದನಂತರ ಬಿಲ್ಡಿಂಗ್ – 1 ರಿಂದ 4

ರವರೆಗೆ ಸಾಮಾನ್ಯ 3 ತಳ ಮಹಡಿಗಳನ್ನೊಳಗೊಂಡಂತೆ ಬಿಲ್ಡಿಂಗ್ – 3 ರಲ್ಲಿನ ಟವರ್ – ಎ, ಸಿ ಮತ್ತು ಇ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳು ಮತ್ತು ಟವರ್ – ಬಿ ಮತ್ತು ಡಿ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳಲ್ಲಿ ಒಟ್ಟಾರೆ 810 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಗಳು ಮತ್ತು ಬಿಲ್ಡಿಂಗ್ – 5, 6 ಮತ್ತು 7 ರಲ್ಲಿ ಸಾಮಾನ್ಯ 2 ತಳ ಮಹಡಿಗಳನ್ನೊಳಗೊಂಡಂತೆ (ವಸತಿ ಸಮುಚ್ಚಯ ಕಟ್ಟಡಗಳು) ಬಿಲ್ಡಿಂಗ್ – 5 ರಲ್ಲಿನ ಟವರ್ – ಎ, ಡಿ, ಎಫ್ ಮತ್ತು ಹೆಚ್ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳು, ಟವರ್ – ಬಿ, ಸಿ, ಇ ಮತ್ತು ಜಿ ರಲ್ಲಿ ಭಾಗಶಃ ಭಾಗದಲ್ಲಿ ನೆಲ + ಮೇಲಿನ 26 ಅಂತಸ್ತುಗಳು ಮತ್ತು ಭಾಗಶಃ ಭಾಗದಲ್ಲಿ ನೆಲ + ಮೇಲಿನ 9 ಅಂತಸ್ತುಗಳಲ್ಲಿ –1132 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ದಿನಾಂಕ: 15–02–2021 ರಂದು ಪ್ರಾರಂಭಿಕ ಪ್ರಮಾಣಪತ್ರ (ಭಾಗಶಃ) ವನ್ನು ನೀಡಲಾಗಿರುತ್ತದೆ. ಸದರಿ ಬಿಲ್ಡಿಂಗ್ – 1 ರಿಂದ 4 ರವರೆಗೆ ಸಾಮಾನ್ಯ 3 ತಳ ಮಹಡಿಗಳನ್ನೊಳಗೊಂಡಂತೆ ಬಿಲ್ಡಿಂಗ್ – 1 ರಲ್ಲಿ ನೆಲ + ಮೇಲಿನ 18 ಅಂತಸ್ತುಗಳ ವಾಣಿಜ್ಯ ಕಟ್ಟಡ ಮತ್ತು ಬಿಲ್ಡಿಂಗ್ – 4 ರ ಟವರ್ – ಎಫ್, ಹೆಚ್, ಜೆ ಮತ್ತು ಎಲ್ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡ, ಟವರ್ – ಜಿ, ಐ, ಕೆ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳ ವಾಣಿಜ್ಯ (ರೀಟೇಲ್ / ಕಛೇರಿ ಮತ್ತು ಹಾಸ್ಟೆಲ್) ಉಪಯೋಗದ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ, ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಿಸುತ್ತಿರುವುದನ್ನು ಪರಿವೀಕ್ಷಿಸಲಾಗಿದೆ.

ಅಪರ ನಿರ್ದೇಶಕರು ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 22–03–2022 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಸಂಬಂಧ ಪ್ರಾರಂಭಿಕ ಪ್ರಮಾಣಪತ್ರ ದಂಡ ಶುಲ್ಕ ರೂ. 16,83,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: RE-ifms 331-TP/000002 ದಿನಾಂಕ: 06–04–2022 ರಂದು ಸಂದಾಯ ಮಾಡಿರುವುದರಿಂದ, ಸದರಿ ಬಿಲ್ಡಿಂಗ್ – 1 ರಿಂದ 4 ರವರೆಗೆ ಸಾಮಾನ್ಯ 3 ತಳ ಮಹಡಿಗಳನ್ನೊಳಗೊಂಡಂತೆ ಬಿಲ್ಡಿಂಗ್ – 1 ರಲ್ಲಿ ನೆಲ + ಮೇಲಿನ 18 ಅಂತಸ್ತುಗಳ ವಾಣಿಜ್ಯ ಕಟ್ಟಡ ಮತ್ತು ಬಿಲ್ಡಿಂಗ್ – 4 ರ ಟವರ್ – ಎಫ್, ಹೆಚ್, ಜೆ ಮತ್ತು ಎಲ್ ರಲ್ಲಿ ನೆಲ + ಮೇಲಿನ 26 ಅಂತಸ್ತುಗಳ ವಸತಿ ಸಮುಚ್ಚಯ ಕಟ್ಟಡ, ಟವರ್ – ಜಿ, ಐ, ಕೆ ರಲ್ಲಿ ನೆಲ + ಮೇಲಿನ 7 ಅಂತಸ್ತುಗಳ ವಾಣಿಜ್ಯ (ರೀಟೇಲ್ / ಕಛೇರಿ ಮತ್ತು ಹಾಸ್ಟೆಲ್) ಉಪಯೋಗದ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

**<u>ಷರತ್ತುಗಳು</u>**

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ಮಂಜೂರಾತಿಯ ಸಿಂಧುತ್ವವು ಉಲ್ಲೇಖ (2) ರಂತೆ ಅನುಮೋದನೆ ನೀಡಿದ ದಿನಾಂಕದಿಂದ 5 ವರ್ಷಗಳ ಅವಧಿಗೆ ಮಾನ್ಯತೆ ಹೊಂದಿದ್ದು, ಈ ಅವಧಿಯೊಳಗೆ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.
4. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
5. ನಿವೇಶನದ ಖಾತಾ ವಿಭಜನೆ, ದಾಖಲಾತಿಗಳನ್ನು / ಸ್ವತ್ತಿನ ಹಕ್ಕನ್ನು ಬದಲಾಯಿಸಿದಲ್ಲಿ ಮತ್ತು ಯಾವುದೇ ರೀತಿ ದಾಖಲಾತಿಗಳನ್ನು ಅಥವಾ ವಾಸ್ತವಾಂಶ ಮರೆಮಾಚಿದಲ್ಲಿ ಅರ್ಜಿದಾರರು ನೇರ ಹೊಣೆಯಾಗಿರುತ್ತಾರೆ ತಪ್ಪಿದ್ದಲ್ಲಿ ನೀಡಲಾದ ಕಟ್ಟಡ ನಕ್ಷೆ ಮಂಜೂರಾತಿಯು ತನ್ನಿಂದತಾನೇ ರದ್ದುಗೊಳ್ಳುತ್ತದೆ.
6. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ಕಟ್ಟಡ ನಿರ್ಮಾಣ ಮತ್ತು ಕಟ್ಟಡ ತೆರವಿನ ತ್ಯಾಜ್ಯದ ನಿರ್ವಹಣೆ ಮತ್ತು ವಿಲೇವಾರಿಯನ್ನು ಮಾಡಲು ಘನತ್ಯಾಜ್ಯ ನಿರ್ವಹಣೆ (ಎಸ್.ಡಬ್ಲ್ಯೂ.ಎಂ) ಉಪನಿಯಮ 2016 ಕ್ಕೆ ಬದ್ಧವಾಗಿರತಕ್ಕದ್ದು.

7. ಕಟ್ಟಡದಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯವನ್ನು ಸಂಪೂರ್ಣವಾಗಿ ಸಂಸ್ಕರಿಸಿ ಬಳಸಿಕೊಳ್ಳುವಂತಹ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ ಅದನ್ನು ನಿರ್ವಹಿಸುವ ಮುಖಾಂತರ Zero Waste Discharge ಮಾಡಲು ಕ್ರಮಕೈಗೊಳ್ಳುವುದು.
8. ಅರ್ಜಿದಾರರು/ಮಾಲೀಕರು/ಡೆವಲಪರ್‌ಗಳು ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಪಾಯಿಂಟ್‌ಗಳನ್ನು ಅಳವಡಿಸಲು ಅಗತ್ಯ ಕ್ರಮವಹಿಸುವುದು.
9. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಸಂಸ್ಕರಿಸಿದ (Treated Water Utilisation for Construction) ನೀರನ್ನು ಕಟ್ಟಡ ನಿರ್ಮಾಣ ಕಾರ್ಯಕ್ಕೆ ಕಡ್ಡಾಯವಾಗಿ ಬಳಸಿಕೊಳ್ಳುವುದು.
10. ಅನುಮೋದಿತ ಅಭಿವೃದ್ಧಿ ಯೋಜನಾ ನಕ್ಷೆಯ ಕಾರ್ಯಾದೇಶದಲ್ಲಿ ವಿಧಿಸಿರುವ ಷರತ್ತುಗಳನ್ನು ಪಾಲಿಸತಕ್ಕದ್ದು.
11. ವಿವಿಧ ಇಲಾಖೆಗಳಿಂದ ನೀಡಲಾಗಿರುವ ನಿರಾಕ್ಷೇಪಣಾ ಪತ್ರದಲ್ಲಿ ವಿಧಿಸಲಾಗಿರುವ ಷರತ್ತಿಗಳಿಗೆ ಬದ್ಧರಾಗಿರತಕ್ಕದ್ದು.
12. ಮಂಜೂರಾತಿ ನಕ್ಷೆಯಂತೆ ಉಳಿದ ಬಿಲ್ಡಿಂಗ್‌ಗಳ ಕಟ್ಟಡದ ಕಾಮಗಾರಿಯನ್ನು ಪ್ರಾರಂಭಿಸಿ ಪಾಲಿಕೆಯಿಂದ ಪ್ರಾರಂಭಿಕ ಪ್ರಮಾಣಪತ್ರವನ್ನು ಪಡೆಯತಕ್ಕದ್ದು.

ಸಹಿ /-

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಗೆ,

ಮೆ॥ ಕಾರ್ನರ್ ಸ್ಟೋನ್ ಬೇ ಈಸ್ಟ್ ಡೆವಲಪರ್ಸ್ ಪ್ರೈ ಲಿ., ಖಾತಾದಾರರು
ಮೆ॥ ಮೈಸೂರು ಪ್ರಾಜೆಕ್ಟ್ಸ್ ಪ್ರೈ ಲಿ., ಜಿ.ಪಿ.ಎ.ದಾರರು,
29ನೇ & 3ನೇ ಮಹಡಿ, ವರ್ಲ್ಡ್ ಟ್ರೇಡ್ ಸೆಂಟರ್,
ಬ್ರಿಗೇಡ್ ಗೇಟ್‌ವೇ ಕ್ಯಾಂಪಸ್ 26/1,
ಡಾ॥ ರಾಜ್‌ಕುಮಾರ್ ರಸ್ತೆ, ಮಲ್ಲೇಶ್ವರಂ–ರಾಜಾಜಿನಗರ,
ಬೆಂಗಳೂರು–560055.

<u>ಪ್ರತಿಯನ್ನು:</u>

1) ಕಾರ್ಯಪಾಲಕ ಅಭಿಯಂತರರು (ಮಹದೇವಪುರ ವಿಭಾಗ), ಸಹಾಯಕ ಕಾರ್ಯಪಾಲಕ ಅಭಿಯಂತರರು, (ವೈಟ್‌ಫೀಲ್ಡ್ ಉಪ–ವಿಭಾಗ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.
2) ಕಛೇರಿ ಪ್ರತಿ.

07/04/2022

ಜಂಟಿ ನಿರ್ದೇಶಕರು (ನಗರ ಯೋಜನೆ –ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

6/4/22 06/04/22 6/4/22